**e ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

ಸಿಸಿ ನಂಃ **89/2013**

ಹೆಸರು ಃ ಹೆಚ್.ಜಿ. ಬಸವರಾಜು

ತಂದೆಯ ಹೆಸರು ಃ ಲೇಟ್ ಗುರುಮಲ್ಲಪ್ಪ ಪಿ.ಡಬ್ಲ್ಯೂ3

ವಯಸ್ಸು ಃ **69** ವರ್ಷ

ಉದ್ಯೋಗ ಃ ನಿವೃತ್ತ ಪೊಲೀಸ್ ಅಧಿಕಾರಿ

ವಾಸ ಸ್ಥಳ ಃ ಎನ್.ಇ.ಎಸ್. ಬಡಾವಣೆ, ಮಳವಳ್ಳಿ.

ಸಾಕ್ಷಿಗೆ ದಿನಾಂಕಃ **07.08.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಾಕ್ಷಿಯ ಹೇಳಿಕೆ ದಂ.ಪ್ರ.ಸಂ. ಕಲಂ **299** ಪ್ರಕಾರ :

ದಿ: 26.03.2015 ರಿಂದ 31.07.2018 ರವರೆಗೆ ನಾನು ಹಲಗೂರು ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ: 20.06.2015 ರಂದು ನ್ಯಾಯಾಲಯದ ಆದೇಶದ ಮೇರೆಗೆ ಉದ್ಘೋಷಣೆಯನ್ನು ಜಾರಿ ಮಾಡಲು ನಾನು ದೊಡ್ಡಬಳ್ಳಾಪುರ ತಾಲ್ಲೂಕು, ತುರುವೇನಹಳ್ಳಿ ಗ್ರಾಮದ ಆರೋಪಿಯ ವಿಳಾಸಕ್ಕೆ ನಾನು ಭೇಟಿ ನೀಡಿರುತ್ತೇನೆ. ಸದರಿ ವಿಳಾಸಕ್ಕೆ ಭೇಟಿ ನೀಡಿ ಆರೋಪಿಯ ಇರುವಿಕೆಯ ಬಗ್ಗೆ ವಿಚಾರಿಸಲಾಗಿ ಕಳೆದ ಒಂದು ವರ್ಷದಿಂದ ಆರೋಪಿಯು ಗ್ರಾಮದಲ್ಲಿ ಇರುವುದಿಲ್ಲವೆಂದು ಗ್ರಾಮಸ್ಥರು ತಿಳಿಸಿರುತ್ತಾರೆ. ಕಳೆದ 20 ದಿನಗಳಿಂದ ಆರೋಪಿಯ ತಂದೆ ತಾಯಿಯು ಮನೆಗೆ ಬೀಗ ಹಾಕಿಕೊಂಡು ಹೋಗಿರುತ್ತಾರೆ ಎಂದು ಗ್ರಾಮಸ್ಥರು ತಿಳಿಸಿರುತ್ತಾರೆ. ಪಂಚರಾದ ವಿಜಿಗಿರಿಯಪ್ಪ, ಲಗುಮಯ್ಯ ಮತ್ತು ಹೀರತಿಪ್ಪಯ್ಯರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ, ಉದ್ಘೋಷಣೆಯ ಪ್ರತಿಯನ್ನು ಆರೋಪಿಯ ಮನೆಯ ಬಾಗಿಲಿಗೆ ಅಂಟಿಸಿರುತ್ತೇನೆ. ಸದರಿ

ಮಹಜರ್‌ನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಆರೋಪಿಯ ಚರ ಅಥವಾ ಸ್ಥಿರ ಆಸ್ತಿಗಳ ಬಗ್ಗೆ ಮಾಹಿತಿ ನೀಡುವಂತೆ ದಿ: 07.05.2015 ರಂದು ಎಸ್.ಎಸ್. ಘಟ್ಟ ಗ್ರಾಮಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ದಾಖಲೆಯನ್ನು ನಿಪಿ 3 ಎಂದು ಗುರುತಿಸಲಾಯಿತು.

4. ತಾಲ್ಲೂಕು ಕಛೇರಿಗೆ ಆರೋಪಿಯ ಸ್ಥಿರಾಸ್ತಿಗಳ ಸಂಬಂಧವಾಗಿ ಮಾಹಿತಿ ಕೋರಿ ಅರ್ಜಿ ಸಲ್ಲಿಸಿರುವುದಿಲ್ಲ ಮತ್ತು ಗ್ರಾಮ ಪಂಚಾಯಿತಿಯಿಂದ ಆರೋಪಿಯ ಚರ ಮತ್ತು ಸ್ಥಿರ ಆಸ್ತಿಗಳ ಇರುವಿಕೆಯ ಬಗ್ಗೆ ಮಾಹಿತಿ ಪಡೆದಿರುವುದಿಲ್ಲ. ಆದ್ದರಿಂದ ಮುಂದಿನ ವಿಚಾರಣೆಗೆ ಸಮಯ ನೀಡಿ ಮುಂದೂಡಲಾಯಿತು.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.